O. S. No:117/2024
PW:1

(ಇಂದು ದಿನಾಂಕಃ **16-06-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

## ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಟಿ ಎಚ್ ವಕೀಲರಿಂದಃ

ದಾವೆಯನ್ನು ಸಲ್ಲಿಸಲು ನನ್ನ ತಂದೆ ಮಾಹಿತಿ ನೀಡಿರುತ್ತಾರೆ. ನಾನು ವಾದ ಪತ್ರವನ್ನು ನೋಡಿರುತ್ತೇನೆ. ವಾದ ಪತ್ರದ ಜೊತೆ ಸಲ್ಲಿಸಲಾದ ವಂಶಾವಳಿಯನ್ನು ನಾನು ನೋಡಿರುತ್ತೇನೆ. ಸದರಿ ವಂಶಾವಳಿಯಲ್ಲಿ ಈಶ್ವರಪ್ಪನ ಮೊದಲನೇಯ ಹೆಂಡತಿ ಕಲಾವತಿಯನ್ನು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿಯವರು ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿಯವರ ಹೆಸರನ್ನು ವಂಶಾವಳಿ ಹಾಗೂ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ. 3 ಮತ್ತು 5ನೇ ಪ್ರತಿವಾದಿಯರು ಈಶ್ವರಪ್ಪರವರಿಗೆ ಕಲಾವತಿಯ ಮುಖಾಂತರ ಜನಿಸಿದ್ದರೂ ಸಹ ಸದರಿ ಅಂಶವನ್ನು ವಂಶಾವಳಿಯಲ್ಲಿ ಕಾಣಿಸಿರುವುದಿಲ್ಲ. ಸದರಿಯವರನ್ನು ಕಾಶವ್ವನ ಮಕ್ಕಳು ಎಂದು ವಂಶಾವಳಿಯಲ್ಲಿ ಮತ್ತು ವಾದಪತ್ರದಲ್ಲಿ ತೋರಿಸಲಾಗಿದೆ ಎಂದರೆ ಸರಿ. ಸದರಿ ಅಂಶ ನನಗೆ ಗೊತ್ತಾದ ನಂತರ ನಾನು ನನ್ನ ತಂದೆಗೆ ಸದರಿ ವಿಷಯ ಪ್ರಶ್ನಿಸಿಲ್ಲ. ನಾನು, 1, 2, 4 ಮತ್ತು 6 ನೇ ಪ್ರತಿವಾದಿಯರು ಮೀಲಾಪಿಯಾಗಿ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಿಸಿ ಹೆಬ್ಬಳ್ಳಿ ಗ್ರಾಮದಲ್ಲಿ ಆಸ್ತಿ ಇರುತ್ತದೆ. ನನಗೆ ಓದಲು ಹಾಗೂ ಬರೆಯಲು ಬರುತ್ತದೆ. ಸಾಕ್ಷಿಗೆ ಹಕ್ಕು ಬದಲಾವಣೆಯನ್ನು ತೋರಿಸಿದ್ದು ಅದನ್ನು ನೋಡಿ ಅದರಲ್ಲಿ ತನ್ನ ಅಜ್ಜ, ತಂದೆ ಹಾಗೂ ದೊಡ್ಡಪ್ಪನ ಹೆಸರು ಇರುವುದಾಗಿ ಒಪ್ಪಿದ್ದರಿಂದ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಸದರಿ ಆಸ್ತಿ ನಮ್ಮ ಕುಟುಂಬದ ಆಸ್ತಿ ಎಂದರೆ ಸಾಕ್ಷಿಯು ಸದರಿ ಜಮೀನಿನಲ್ಲಿ ಈಗಾಗಲೇ ಪಾಲು ವಿಭಾಗ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಜಮೀನಿನ ಕುರಿತು ವಾಟ್ನಿಯಾದ ಬಗ್ಗೆ ನನ್ನ ವಾದ ಪತ್ರದಲ್ಲಿ ಕಾಣಿಸಿರುವುದಿಲ್ಲ. ಸದರಿ ಜಮೀನಿನಲ್ಲಿ ನನ್ನ ತಂದೆ ಹಾಗೂ ಆತನ ಸಹೋದರರಿಗೆ ಸಮನಾಗಿ ತಲಾ 8 ಎಕರೆ ಜಮೀನು ಬಂದಿದ್ದು, ಆದರೆ ಅವುಗಳ ಚೆಕ್ಕುಬಂದಿ ಹೇಳಲಾಗುವುದಿಲ್ಲ. ಆದರೆ ಯಾರಿಗೆ ಯಾವ ಭಾಗದ ಆಸ್ತಿ ಬಂದಿರುತ್ತದೆ ಎಂದು ಹೇಳಲಾಗುವುದಿಲ್ಲ. ಸದರಿ ಜಮೀನಿನಲ್ಲಿ ಯಾವುದೇ ರೀತಿ ಪಾಲು ವಿಭಾಗವಾಗಿಲ್ಲ ಹಾಗೂ ನನ್ನ ತಂದೆ ಹಾಗೂ ಆತನ ಸಹೋದರರು ಕಂದಾಯ ಇಲಾಖೆಯವರೊಂದಿಗೆ ಸೇರಿ ನಿಡಿ-1 ನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಈಶ್ವರಪ್ಪ ಮೃತಪಟ್ಟ ನಂತರ ಸದರಿ ಜಮೀನು ಆತನ ಹೆಂಡತಿ ಮತ್ತು ಹೆಸರಿನಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಡಿ-2** ಎಂದು ಗುರುತಿಸಲಾಯಿತು. ಸದರಿ ಜಮೀನಿನಲ್ಲಿಯೂ ಸಹ 3 ಮತ್ತು 5ನೇ ಪ್ರತಿವಾದಿಯರಿಗೆ ಪಾಲು ಇರುತ್ತದೆ ಎಂದರೆ ಸಾಕ್ಷಿಯು ಸದರಿಯವರು ತಮ್ಮ ಪಾಲಿಗೆ ಬಂದ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿದಿರುತ್ತಾರೆ. ಸದರಿ

ಆಸ್ತಿಯನ್ನು ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

2. ಮೃತ ಈಶ್ವರಪ್ಪ ಗದಗ ನ ಜೆ ಟಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸದರಿಯವರು ಎಫ್ ಡಿ ಎ ಎಂದು ಕೆಲಸ ನಿರ್ವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ತಾವು ಕೂಡಿಟ್ಟ ಹಣದಿಂದ ಬೇಟಗೇರಿ ಗ್ರಾಮದ ನಿವೇಶನ ಸಂಃ 237/ಬಿ ನೇದ್ದರಲ್ಲಿ ನಿವೇಶನ ಸಂಃ 16 ಕ್ಷೇತ್ರ 2 ಗುಂಟೆ 2 ಆಣೆ ¼ ಅಂಶವನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿಯವರು ಬೇರೆ ಕಡೆಗೆ ಆಸ್ತಿ ಖರೀದಿಸುವ ಉದ್ದೇಶದಿಂದ ಸದರಿ ಆಸ್ತಿಯನ್ನು ಒಬ್ಬ ನಾಗೇಂದ್ರಪ್ಪ ವಿರೂಪಾಕ್ಷಪ್ಪ ಗಂಗಮ್ಮನವರ ರವರಿಗೆ ರೂ. 19,00,000/- ದಿನಾಂಕಃ 11-09-2015 ರಂದು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿ ಅವರ ಸ್ವಂತ ಆಸ್ತಿಯಾದ ಕಾರಣ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಹಣ 2, 4 ಮತ್ತು 6 ನೇ ಪ್ರತಿವಾದಿಯರ ಬಳಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಈಶ್ವರಪ್ಪ ಮೃತಪಟ್ಟ ನಂತರ ಸದರಿ ಹಣದಿಂದ 2 ಮತ್ತು 4 ನೇ ಪ್ರತಿವಾದಿಯರ ಹೆಸರನಲ್ಲಿ ಬೇಟಗೇರಿ ಗ್ರಾಮದ ವಿಭಾ ಅಪಾರ್ಟಮೆಂಟ್ ನಲ್ಲಿ ವಾರ್ಡ ಸಂಃ 28, 2 ನೇ ಅಂತಸ್ತಿನಲ್ಲಿರುವ ಮನೆ ಸಂಃ 28-1-5055/S-1-4 ನೇದ್ದನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಅಂಶ ನನಗೆ ಗೊತ್ತಿದ್ದರೂ ಸಹ ನಾನು, 1, 2, 4 ಮತ್ತು 6 ನೇ ಪ್ರತಿವಾದಿಯರು ಸೇರಿ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿಯೂ ಸಹ 3 ಮತ್ತು 5 ನೇ ಪ್ರತಿವಾದಿಯರಿಗೆ ಹಕ್ಕು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**